# ಶ್ರೀ ವಿ ಜ ಯೀ ಂ ದ್ರ ತೀ ರ್ಥ ಗು ರು ಭ್ಯೋ ನ ಮಃ

**ಭಕ್ತಾನಾಂ ಮಾನಸಾಂಭೋಜ ಭಾನವೇ ಕಾಮಧೇನವೇ ।**
**ನಮತಾಂ ಕಲ್ಪತರವೇ ಜಯೀಂದ್ರ ಗುರವೇ ನಮಃ ॥**

ಭಕ್ತರ ಮನಸ್ಸೆಂಬ ಕಮಲಗಳನ್ನು ಅರಳಿಸುವ ಸೂರ್ಯ–ನಂತಿರುವ, ನಮಿಸುವವರಿಗೆ ಕಾಮಧೇನುವೂ, ಕಲ್ಪವೃಕ್ಷವೂ ಆದ ವಿಜಯೀಂದ್ರತೀರ್ಥರಿಗೆ ನಮನಗಳು.

**( ಆ ರಾ ಧ ನೆ : ಜೇ ಷ್ಠ ಮಾ ಸ ಕೃ ಷ್ಣ ಪ ಕ್ಷ ತ್ರ ಯೋ ದ ಶಿ )**

**ರಾ ಗ – ಶ ಂ ಕ ರಾ ಭ ರ ಣ : ತಾ ಳ – ಆ ದಿ ತಾ ಳ**

ವಿಜಯೀಂದ್ರ ಮುನೀಂದ್ರರೆಂಬಾಶ್ಚರ್ಯದ
ಗಜೇಂದ್ರ ಬಂದದೆ ಸುಜನರು ನೋಡ ಬನ್ನಿ । ಪ ।
ಕಲುಷವೆಂಬ ಪಂಕವನೀಡ್ಯಾಡಿ । ವಿಮಲ ಹರಿಪದ ತೀರ್ಥದ ಜಲಪಾನ ಮಾಡಿ
ಸಲೆ ಗುರುಮಧ್ವ ಮತಾಂಬುಧಿಯೊಳು ನಲಿನಲಿದು ಕುಣಿದಾಡುತಲೀ । ೧ ।
ರಮೇಶನ ಧ್ಯಾನವೆಂಬ ಮದವೇರಿ ಮಮತೆಯೆಂಬ ಕದಳಿ ಕಿತ್ತೀಡಾಡಿ
ವಿಮಲ ಶ್ರೀಹರಿಪದರಜ ಶಿರದಿ ಧರಿಸಿ ಕುಮತಗಳೆಂಬ ತರುಗಳ ಮುರಿಯುತಲೀ । ೨ ।
ಗುರು ಸುರೇಂದ್ರತೀರಥರೆಂಬ ವರಮಾವಟಿಗನ ಆಜ್ಞೆಯೊಳಿದ್ದು
ಗುರುಪುರಂದರವಿಟ್ಠಲನ ಭಕ್ತಿಯೆಂಬ ಸರಪಣಿಯೊಳು ನಲಿನಲಿದಾಡುತಲೀ । ೩ ।

**ರಾ ಗ – ಹ ಂ ಸ ಧ್ವ ನಿ : ತಾ ಳ – ಆ ದಿ ತಾ ಳ**

ವಿಜಯೀಂದ್ರ ಯತಿಯ ನಾ ಕಂಡೆ । ಮುದಗೊಂಡೆ । ಪ ।
ವಿಜಯ ಡಂಗುರ ಹೊಯಿಸಿ ಗಜವೇರಿ ಬರುತಿಪ್ಪ । ಅ ಪ ।
ನಿಜದಿ ಲಿಂಗಣ್ಣನ ಗೆಲಿದು । ಮಠವನು ಪಡೆದು ।
ಸುಜನರ ಭಯ ಪರಿಹರಿಸುತ ಮೆರೆಯುವ । ೧ ।
ಹರಿಯೇ ಪರನೆಂಬುವ ಸರ್ವ ಶಾಸ್ತ್ರ ಕೋವಿದನ
ಧರಣೀಶನುತ ವ್ಯಾಸಮುನಿಯ ವಿದ್ಯಾಸುತನ । ೨ ।
ಸುಖಮುನಿಯಾಸ್ಥಾನ ರಾಜನ ವರತೇಜನ
ಅಕಳಂಕ ಮಹಿಮಾಸಿರಿ ಸುರೇಂದ್ರನ ಕುವರನ । ೩ ।
ಚಾಷಷ್ಟಿ ಕಲೆಗಳರಿತವನ ಮಾಯಿಭೀಕರನ ಶ್ರೀಶ
ಗುರುಪುರಂದರವಿಟ್ಠಲನ್ನ ಭಜಿಪನ್ನ । ೪ ।